


■ **ವಿಕಾಸ್ ನೇಗಿಲೋಣಿ**
ಚಿತ್ರ: ವಿಶ್ವನಾಥ ಎ.ಎಸ್.

ರಾಜೇಂದ್ರಪ್ಪನ ನಾಲ್ಕನೇ ಮಗ ರಾಹುಲ್. ಗೌರಿಬಿದನೂರಿನ ಸರ್ಕಾರಿ ಆಸ್ಪತ್ರೆಯ ಕಾಂಪೌಂಡರ್ ಆಗಿದ್ದ ರಾಜೇಂದ್ರಪ್ಪ ಮನೆಗೆ ತರುತ್ತಿದ್ದ ಔಷಧಿ ವಾಸನೆಯಲ್ಲೇ ದೊಡ್ಡವರಾದ ಮಕ್ಕಳಲ್ಲಿ ರಾಹುಲನೂ ಒಬ್ಬ. ಆದರೆ ಯಾವಾಗೆಂದರೆ ಆವಾಗ ಅಸ್ತಮಾಕ್ಕೆ ತುತ್ತಾಗಿ ಕಷ್ಟ ಅನುಭವಿಸುತ್ತಿದ್ದ ರಾಹುಲನಿಗೆ ಆ ಔಷಧಿ ವಾಸನೆ ಕಾಯಿಲೆಯಾಗದೇ ಔಷಧವಾಗಿ ಪರಿಣಮಿಸಿತು. ಹೋಗುತ್ತಾ ಹೋಗುತ್ತಾ ಆ ಔಷಧಿ ಪರಿಮಳ ಒಂದು ರೀತಿ ವಿಚಿತ್ರ ಉನ್ಮಾದವನ್ನಂತೂ ತರುತ್ತಿತ್ತು. ಹಾಗೆ ಆಸ್ಪತ್ರೆಯ ಪರಿಮಳ ಬೆಳೆಸಿದ ರಾಹುಲ್ ಡಾಕ್ಟರ್ ಓದುತ್ತೇನೆ ಅಂತ ಹೋಗಲಿಲ್ಲ, ಮೆಡಿಕಲ್ ಸ್ಟೋರ್‌ನಲ್ಲಿ ಕೆಲಸಕ್ಕಿರಬೇಕು ಅಂತ ಆಸೆಪಟ್ಟು ಕೂತುಬಿಟ್ಟ.

ತನ್ನ ಕಾಲಕ್ಕೇ ಇದೆಲ್ಲ ಸಾಕು, ಮಕ್ಕಳಾದರೂ ಹೆಚ್ಚು ಸಂಬಳ ತರುವ ಕೆಲಸಕ್ಕೆ ಹೋಗಲಿ ಅಂತ ಆಸೆಪಟ್ಟಿದ್ದ ರಾಜೇಂದ್ರಪ್ಪನಿಗೆ ಈ ನಾಲ್ಕನೇ ಮಗ ಏಳನೇ ಮನೆಯ ಶನಿಯಾಗಿ ಪರಿಣಮಿಸಿದ. ಚಿಕ್ಕಂದಿನಲ್ಲಿ ಅಪ್ಪನ ಜೊತೆ ತಾನೂ ಆಸ್ಪತ್ರೆಗೆ ಬರುತ್ತೇನೆ ಅಂದಾಗ ಊರವರಿಗೆಲ್ಲ ಚುರುಕಾಗಿರೋ ಮಗನನ್ನು ತೋರಿಸುವ ಉತ್ಸಾಹ ಅವನನ್ನು ಕುರುಡು ಮಾಡಿತ್ತು. ಚೂಟಿಯಾಗಿ ಮಾತಾಡಿಕೊಂಡು, ಗವರ್ನಮೆಂಟ್ ಆಸ್ಪತ್ರೆಯ ತುಂಬ ಓಡಾಡಿಕೊಂಡು, ಆ ಔಷಧಿ ಈ ಮಾತ್ರೆ ಅಂತ ತಂದುಕೊಡುತ್ತಿದ್ದ ಹುಡುಗನಲ್ಲಿ ಮಾತ್ರೆ, ಔಷಧವನ್ನು ಕೈಲಿ ಹಿಡಿಸುವ ಅಭ್ಯಾಸವನ್ನು ರೂಢಿಸಿದ್ದೇ ತಂದೆ. ಆದರೆ ಯಾರ ಭವಿಷ್ಯ ಯಾವಾಗ ಯಾರ ಕೈಗೆರೆಯಾಗಿ ಮೂಡುತ್ತದೋ, ಯಾರು ಬಲ್ಲರು? ಎಸ್ಸೆಸ್ಸೆಲ್ಸಿ ಮುಗಿಸಿ ಮುಂದೇನು ಅಂತ ಪ್ರಶ್ನೆ ಕೇಳುವಾಗ ಮೆಡಿಕಲ್ಲು ಅಂದ ಮಗ. ಡಾಕ್ಟರ್ ಆಗುತ್ತಾನೆ ಅಂತ ಅಪ್ಪ ಹೆಮ್ಮೆ ಪಟ್ಟನಾದರೂ ಮಗನ ಎದೆಯಲ್ಲಿದ್ದ ಮಾತು ಮೆಡಿಕಲ್ ಸ್ಟೋರ್ ಅಂತ ಹೇಗಾದರೂ ಗೊತ್ತಾಗಬೇಕು!

ಓದು ಅಂತ ತನ್ನ ತಮ್ಮನ ಮನೆಗೆ ಕಳಿಸಿಕೊಟ್ಟರೆ ಅವನಿಗೆ ಓದಿನ ಬಗ್ಗೆ ಅಷ್ಟಾಗಿ ಆಸಕ್ತಿಯೇ ಇರಲಿಲ್ಲ. ಮೊದಮೊದಲು ಊರು ಬಿಟ್ಟ ಬೇಸರಕ್ಕೆ ಓದು ತಲೆಗೆ ಹತ್ತುತ್ತಿರಲಿಕ್ಕಿಲ್ಲ ಅಂತ ತಮ್ಮನಿಗೆ ಸಮಾಧಾನ ಮಾಡಲು ಪ್ರಯತ್ನಪಟ್ಟನಾದರೂ ಆಮೇಲೆ ವಿಷಯವೇ ಬೇರೆ ಅಂತ ಅನ್ನಿಸಿಹೋಯಿತು. ಕಾಲೇಜಿಗೆ ಅಂತ ಹೋದ ಹುಡುಗ ಆರು ತಿಂಗಳು ಯಾರಿಗೂ ಹೇಳದೇ